## ಕರ್ನಾಟಕ ವಿಧಾನ ಪರಿಷತ್ತು

1). ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1488

2). ಸದಸ್ಯರ ಹೆಸರು : ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು)

3). ಉತ್ತರಿಸುವ ದಿನಾಂಕ : 19.03.2020

4). ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2019-20ನೇ ಸಾಲಿನಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅನುದಾನ ನೀಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? | ದಿನಾಂಕ;01.04.2019ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಉಳಿತಾಯ ಖಾತೆಯಲ್ಲಿ ರೂ.948.97 ಕೋಟಿಗಳು ಇದ್ದರೂ, 2019-20ನೇ ಸಾಲಿನಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಎರಡು ಕಂತುಗಳ ಅನುದಾನ ರೂ.299.67 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. |
| (ಆ) | ನಿಗಧಿತ ಕಾಲದಲ್ಲಿ ಅನುದಾನ ಬಿಡುಗಡೆಯಾಗದೇ ಇರಲು ಕಾರಣವೇನು? | ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ದಿನಾಂಕ:01.04.2019ಕ್ಕೆ ರೂ.948.97 ಕೋಟಿಗಳು ಉಳಿದಿರುತ್ತದೆ. ಪಿ.ಡಿ.ಖಾತೆಯಲ್ಲಿರುವ ಅನುದಾನದಲ್ಲಿ ಶೇ75 ರಷ್ಟು ವೆಚ್ಚ ಭರಿಸಿದ ನಂತರ ಕಂತುಗಳನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. |
| (ಇ) | ಬಾಕಿ ಉಳಿದ ಮೂರು ಕಂತುಗಳ ಮೊತ್ತವನ್ನು ಯಾವಾಗ ಬಿಡುಗಡೆ ಮಾಡಲಾಗುವುದು: | ಜಿಲ್ಲಾಧಿಕಾರಿಗಳು ಪಿ.ಡಿ.ಖಾತೆಯಲ್ಲಿರುವ ಅನುದಾನದಲ್ಲಿ ಶೇ75 ರಷ್ಟು ವೆಚ್ಚ ಭರಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದಲ್ಲಿ ಅನದಾನವನ್ನು ಬಿಡುಗಡೆ ಮಾಡಲಾಗುವುದು. |
| (ಈ) | ಈಗಾಗಲೇ 2019-20 ನೇ ಸಾಲಿನಲ್ಲಿ ಅನುಮೋದನೆ ನೀಡಿದ್ದ ಕಾಮಗಾರಿಗಳಿಗೆ ಸರಿಯಾದ ಸಮಯದಲ್ಲಿ ಅನುದಾನ ಬಿಡುಗಡೆಯಾಗದೇ ಇರುವುದರಿಂದ ಮಾರ್ಗಸೂಚಿ ಕಂಡಿಕೆ 4 ಮತ್ತು ಕಂಡಿಕೆ 4.1ಕ್ಕೆ ತಿದ್ದುಪಡಿ ಮಾಡಲು ಚಿಂತನೆ ಮಾಡಲಾಗಿದೆಯೇ ? | **ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಮೇ-2014ರ** ಪರಿಷ್ಕೃತ ಮಾರ್ಗಸೂಚಿಯ ಕಂಡಿಕೆಗಳಲ್ಲಿ ಈ ಕೆಳಕಂಡಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ:<br>1. ಕಂಡಿಕೆ-3.2:-ಆರ್ಥಿಕ ವರ್ಷದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಕಾಮಗಾರಿಗಳ ಪಟ್ಟಿಯನ್ನು ಶಾಸಕರು, ಯಾವ ಜಿಲ್ಲಾಧಿಕಾರಿಯ ಅಧಿಕಾರವ್ಯಾಪ್ತಿಯೊಳಗೆ ನಿರ್ವಹಿಸಬೇಕಾಗಿದೆಯೋ ಆ ಜಿಲ್ಲಾಧಿಕಾರಿಗಳಿಗೆ ಆರ್ಥಿಕ ವರ್ಷ ಪ್ರಾರಂಭಗೊಂಡಂತೆಯೇ ಸಲ್ಲಿಸುವುದು.<br>ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಶಾಸಕರುಗಳಿಂದ ಕಾಮಗಾರಿ ಪಟ್ಟಿಯನ್ನು ಪಡೆದುಕೊಂಡು ಶಾಸಕರುಗಳನ್ನೊಳಗೊಂಡಂತೆ ಅನುಷ್ಠಾನಾಧಿಕಾರಿಗಳೊಂದಿಗೆ ಸಭೆ ನಡೆಸಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ |

| | | |
|---|---|---|
| | | ಅಂತ್ಯದೊಳಗೆ ಅಂತಿಮಗೊಳಿಸುವುದು. ಅನುಮೋದನೆಗೊಂಡ ಕ್ರಿಯಾ ಯೋಜನೆಯ ಪ್ರತಿಯನ್ನು ಯೋಜನಾ ಇಲಾಖೆಗೆ ಸಲ್ಲಿಸುವುದು.<br><br>2. ಕಂಡಿಕೆ-4.1:- ನಿರ್ದಿಷ್ಟ ವರ್ಷದಲ್ಲಿ ಬಿಡುಗಡೆಯಾದ ನಿಧಿಗಳ ಪೈಕಿ ಬಳಕೆಯಾಗದೆ ಉಳಿದ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದರೆ, ಅದನ್ನು ಮುಂದಿನ ವರ್ಷಕ್ಕೆ ಮಾತ್ರ ಉಪಯೋಗಿಸಬಹುದಾಗಿದೆ. ಆ ಮೊತ್ತವು ಮುಂದಿನ ವರ್ಷದ ಕೊನೆಯಲ್ಲಿ ಖರ್ಚಾಗದೆ ಉಳಿದರೆ ಆ ಮೊತ್ತವನ್ನು ರದ್ದುಪಡಿಸಲಾಗುವುದು. ಅಲ್ಲದೆ, ಆ ವರ್ಷದಲ್ಲಿ ನಿಧಿಗಳನ್ನು ಕ್ಲೇಮು ಮಾಡದಿದ್ದಲ್ಲಿ, ಹಣಕಾಸು ವರ್ಷದ ಕೊನೆಯಲ್ಲಿ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು.<br><br>3. ಕಂಡಿಕೆ-4.2:- ಮೊದಲನೇ ಕಂತನ್ನು ಹಣಕಾಸು ವರ್ಷದ ಪ್ರಾರಂಭದ ಅವಧಿಯಲ್ಲಿ ಸಾಧ್ಯವಾದಷ್ಟು ಬೇಗನೆ ಬಿಡುಗಡೆ ಮಾಡತಕ್ಕದ್ದು. ನೋಡಲ್ ಜಿಲ್ಲಾಧಿಕಾರಿಗಳು, ಯೋಜನೆಯ ಮುಂದಿನ ಕಂತುಗಳ ಬಿಡುಗಡೆಗಾಗಿ ಕೋರಿಕೆಯನ್ನು ಸಲ್ಲಿಸತಕ್ಕದ್ದು. ಎರಡನೆಯ ಕಂತನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗುವುದು.<br><br>i. ಹಿಂದಿನ ವರ್ಷದಲ್ಲಿ ಬಿಡುಗಡೆ ಮಾಡಿದ ಹಣದ ಶೇಕಡ 80 ರಷ್ಟನ್ನು ಖರ್ಚುಮಾಡಿರಬೇಕು.<br>ii. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಹಣವು ಮಂಜೂರಾದ ಎಲ್ಲಾ ಕಾಮಗಾರಿಗಳ ಮೊತ್ತವನ್ನು ಗಣನೆಗೆ ತೆಗೆದುಕೊಂಡು ನಂತರ ರೂ.25.00 ಲಕ್ಷಕ್ಕಿಂತ ಕಡಿಮೆ ಇರಬೇಕು.<br>iii. ಸಂಬಂಧಪಟ್ಟ ಶಾಸಕರ ನಿಧಿಯ ಖರ್ಚಾಗದೇ ಉಳಿದಿರುವ ಹಣವು ರೂ.50.00 ಲಕ್ಷಗಳಿಗಿಂತ ಕಡಿಮೆ ಇರಬೇಕು.<br>iv. ಹಿಂದಿನ ವರ್ಷದ ಹಣ ಬಳಕೆ ಪ್ರಮಾಣ ಪತ್ರಗಳನ್ನು ಕಳುಹಿಸಬೇಕು ಹಾಗೂ ಅದಕ್ಕಿಂತ ಹಿಂದಿನ ವರ್ಷದ ಆಡಿಟ್ ವರದಿಗಳನ್ನು ಯೋಜನಾ ಇಲಾಖೆಗೆ ಕಳುಹಿಸಬೇಕು.<br>v. ಜಿಲ್ಲಾಧಿಕಾರಿಗಳು ಎರಡನೆಯ ಕಂತನ್ನು ಬಿಡುಗಡೆ ಮಾಡುವಾಗ Online ಮಾಸಿಕ ಪ್ರಗತಿಯ ವರದಿಗಳನ್ನು ವೀಕ್ಷಿಸಲಾಗುವುದು. ಜಿಲ್ಲಾಧಿಕಾರಿಗಳು ಮಾಸಿಕ ಪ್ರಗತಿಯ ವರದಿಯನ್ನು ಯೋಜನಾ ಇಲಾಖೆಗೆ |

| | | | |
|---|---|---|---|
| | | | ಕಳುಹಿಸುವುದು ಎಂಬುದಾಗಿ ಮಾರ್ಗಸೂಚಿಯಲ್ಲಿ ಇರುವುದರಿಂದ ಹಾಲಿ ಮಾರ್ಗಸೂಚಿಯಲ್ಲಿನ ಷರತ್ತುಗಳು ಕಾಮಗಾರಿಗಳ ಅನುಷ್ಠಾನಕ್ಕೆ ಸರಿಯಿರುವುದರಿಂದ ಮಾರ್ಗಸೂಚಿಯಲ್ಲಿ ಕಂಡಿಕೆ-4 ಮತ್ತು ಕಂಡಿಕೆ-4.1ಕ್ಕೆ ತಿದ್ದುಪಡಿ ತರುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಪಿಡಿಎಸ್ 24 ಕೆಎಲ್ಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ